ಮಾತನಾಡುವುದಕ್ಕೆ ಯಾವ ಹಕ್ಕಿದೆ? ಇವರು ಜಾತಿವಾದಿಗಳು, ನಮಗೆ ಇವರು ಹೇಳುತ್ತಾರೆ, ನಾಚಿಕೆಯಾಗಬೇಕು.

(ಈ ಹಂತದಲ್ಲಿ ಶ್ರೀಮತಿ ಭಾಗೀರಥಿ ಟಿ. ಮರುಳಸಿದ್ಧನಗೌಡ ಅವರು ಧರಣಿ ಮಾಡಲು ಸದನದ ಬಾವಿಗೆ ಬಂದರು)

(ಗೊಂದಲ)

ಅಧ್ಯಕ್ಷರು: ಮಾನ್ಯ ಕೆ.ಎಸ್.ಈಶ್ವರಪ್ಪನವರೆ, ನಿಮ್ಮ ವಿಚಾರವನ್ನು ನೀವು ಹೇಳಿದ್ದೀರಿ, ಅವರ ವಿಚಾರಗಳನ್ನು ಅವರು ಹೇಳಿದ್ದಾರೆ. ಶ್ರೀಮತಿ ಭಾಗೀರಥಿ ಟಿ. ಮರುಳಸಿದ್ಧನಗೌಡರವರೆ, ನಾನು ಹೆಣ್ಣು ಮಕ್ಕಳಿಗೆ ಅಗೌರವ ಮಾಡಬೇಕೆಂದು ಹೇಳಿಲ್ಲ. ನಮ್ಮ ಹಳ್ಳಿಗಳಲ್ಲಿ ಹೆಣ್ಣು ಮಕ್ಕಳು ಪರಸ್ಪರ ಜಗಳಕ್ಕೆ ನಿಂತುಕೊಂಡರೆ, ಅವರ ಶಬ್ಧ ಸಂಪತ್ತು ಇದೆಯಲ್ಲಾ, ಅದು ಯಾರಿಗೂ ಇಲ್ಲವೇನೋ ಎಂದು ಅನ್ನಿಸುತ್ತದೆ. ಆ ರೀತಿಯಲ್ಲಿ ಅವರು ಜಗಳವನ್ನು ಮಾಡುತ್ತಾರೆ. ಅದನ್ನು ನಾನು ಇಲ್ಲಿ ಉದಾಹರಣೆಯನ್ನು ಕೊಟ್ಟು ಆ ರೀತಿಯಾಗುತ್ತದೆಂದು ಹೇಳಿದೆ, ತಪ್ಪು ಏನೂ ಹೇಳಿಲ್ಲ. ಆದುದರಿಂದ ಅಗೌರವ ಮಾಡಬೇಕೆಂಬ ದೃಷ್ಟಿ ಏನೂ ಇಲ್ಲ, ತಾವು ದಯಮಾಡಿ ತಮ್ಮ ಸ್ಥಳಕ್ಕೆ ಹೋಗಿ. ನಾನು ನಡೆಯುತ್ತಿರುವಂಥಾದ್ದನ್ನು ಹೇಳಿದೆ, ಅಗೌರವ ಮಾಡಬೇಕೆಂದು ಏನೂ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ತಾವು ನೇರವಾಗಿ ಹೇಳಿದ್ದೀರಿ. ಹೆಣ್ಣು ಮಕ್ಕಳ ಬಗ್ಗೆ ಹೇಳಿದಾಗ naturally ಅವರು ಹೇಳುತ್ತಾರೆ . ನಮ್ಮನ್ನು ಅವಮಾನ ಮಾಡುವ ದೃಷ್ಟಿಯಿಂದ ತಾವು.....

ಅಧ್ಯಕ್ಷರು: ಅವಮಾನವೆಂದು ಅಲ್ಲ, ಅಗೌರವ ಮಾಡುವಂಥಾದ್ದು ಅಲ್ಲ. ನಾನು ಅದನ್ನು ಉದಾಹರಣೆಯಾಗಿ ಕೊಟ್ಟಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಆ ಪದಗಳನ್ನು ಕಡತದಿಂದ ತೆಗೆಸಿ ಹಾಕಿ.

ಅಧ್ಯಕ್ಷರು: ಆಯಿತು, ಅದನ್ನು ಕಡತದಿಂದ ತೆಗೆಸುತ್ತೇನೆ. ನಾನು ಹಳ್ಳಿಗಳಲ್ಲಿ ಏನು ನಡೆಯುತ್ತದೆಂಬ ಬಗ್ಗೆ ಉದಾಹರಣೆಯಾಗಿ ಕೊಟ್ಟಿದ್ದು. ಈಗ ಬಿಸಿನೆಸ್ ಅನ್ನು ತೆಗೆದುಕೊಳ್ಳೋಣ.

ಶ್ರೀಮತಿ ಜೆ. ಸುನೀತಾ ವೀರಪ್ಪಗೌಡ: ಮಾನ್ಯ ಅಧ್ಯಕ್ಷರೆ, ಈ ರೀತಿ ಯಾವ ಮಹಿಳೆಯೂ ನಡೆದುಕೊಳ್ಳುವುದಿಲ್ಲ.

(ಗೊಂದಲ)

(ಈ ಹಂತದಲ್ಲಿ ಧರಣಿನಿರತರಾಗಿದ್ದ ಶ್ರೀಮತಿ ಭಾಗೀರಥಿ ಟಿ. ಮರುಳಸಿದ್ಧನ ಗೌಡ ಅವರು ಸದನದ ಬಾವಿಯಿಂದ ತಮ್ಮ ಆಸನಕ್ಕೆ ತೆರಳಿದರು)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಮಿಷ ಮಾತನಾಡುತ್ತೇನೆ. ಇಲ್ಲಿ ಚರ್ಚೆಗಳು ದೀರ್ಘವಾಗಿ ನಡೆದು, ಒಂದು ಹಂತಕ್ಕೆ ತಲುಪುವ ಸಂದರ್ಭ ಬಂದಾಗ, ಒಂದು ವಿಚಾರ ನನಗೆ ಜ್ಞಾಪಕಕ್ಕೆ ಬಂತು. ಮಾನ್ಯ ಸಿದ್ಧರಾಮಯ್ಯನವರು ಈ ಕಡೆಗೆ ಹೋಗಿದ್ದಾರೆಂದು ಹೇಳುತ್ತಿದ್ದಾರೆ. ಮಾನ್ಯ ಸಿದ್ಧರಾಮಯ್ಯನವರು ಪಕ್ಷವನ್ನು ಬಿಟ್ಟು ಈ ಕಡೆ ಬಂದರು. ಅವರು ಆ ಪಕ್ಷವನ್ನು ಬಿಡುವಾಗ ಏಕೆ ಬಿಟ್ಟರು, ಹೇಗೆ ಬಿಟ್ಟರು, ಎಂಬ ಬಗ್ಗೆ ನಾವು ಬಹಳ ಒತ್ತಾಯವನ್ನು ಮಾಡಿದೆವು. ಅವರು ಬಂದಾದ ಮೇಲೆ, ಮತ್ತೆ ಅವರು ಚುನಾವಣೆಯಲ್ಲಿ ಗೆದ್ದು ಈ ಕಡೆಗೆ ಬಂದರು. ಮಾನ್ಯ ಸಿದ್ಧರಾಮಯ್ಯನವರು ಈ ಕಡೆಗೆ ಬರದೇ ಇದ್ದಿದ್ದರೆ, ಇವರು ಯಾರೂ ಮುಖ್ಯಮಂತ್ರಿಗಳಾಗುತ್ತಿರಲ್ಲಿಲ್ಲ, ಮಂತ್ರಿಗಳು ಒಬ್ಬರೂ ಆಗುತ್ತಿರಲಿಲ್ಲ. ಅದುದರಿಂದ ನನಗೆ ಏನು ಅನಿಸುವುದೆನೆಂದರೆ, ಮಾನ್ಯ ಸಿದ್ದರಾಮಯ್ಯನವರನ್ನು ಬೈಯುವ ಬದಲು ಈ ಕಡೆ ಬಂದುದ್ದರಿಂದ ಕದ್ದಾದರೂ ಫೋಟೊವನ್ನು ಇಟ್ಟುಕೊಂಡು ಪೂಜೆ ಮಾಡುವುದು, ಒಳ್ಳೆಯದೆಂದು ನನಗನಿಸುತ್ತದೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾನು ಯಾವತ್ತು ಕೂಡ ಒಂದು ಸಿದ್ಧಾಂತವನ್ನು ನಂಬಿರುವಂಥಾದ್ದಕ್ಕೆ ದ್ರೋಹವನ್ನು ಮಾಡುವಂಥಾದ್ದು ಇವತ್ತಿನವರೆಗೂ ಗೊತ್ತಿಲ್ಲ. ನಾನು ಮಾಡುವುದೂ ಇಲ್ಲ, ಎಲ್ಲಿಯವರೆಗೆ ರಾಜಕಾರಣದಲ್ಲಿ ಇರುತ್ತೇನೆ, ಸಾರ್ವಜನಿಕ ಜೀವನದಲ್ಲಿ ಇರುತ್ತೇನೆ. ಅಲ್ಲಿಯವರೆಗೆ ನಾವು ಯಾವ ಸಿದ್ಧಾಂತವನ್ನು ಪ್ರತಿಪಾದನೆ ಮಾಡಿಕೊಂಡು ಬಂದಿದ್ದೇವೆ. ಆ ಸಿದ್ಧಾಂತದ ಚೌಕಟ್ಟಿನಲ್ಲೇ ಕೆಲಸವನ್ನು ಮಾಡುತ್ತೇವೆ. ನಾನು ಯಾವ ಪಕ್ಷದಿಂದ ಗೆದ್ದಿದ್ದೆ, ಯಾವ symbol ನಿಂದ ಗೆದ್ದಿದ್ದೆ. ಆ ಪಕ್ಷಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದೇನೆ. ಹಾಗೆ ಮಾಡುವುದಕ್ಕಿಂತ ಮುಂಚಿತವಾಗಿ, ಆ ಪಕ್ಷ ನಡೆದುಕೊಂಡ ರೀತಿಯಿಂದ, ಅವರು ಬಿ.ಜೆ.ಪಿ.ಯವರೊಡನೆ ಸೇರಿಕೊಂಡಿದ್ದರಿಂದ ನಾವು ರಾಜೀನಾಮೆಯನ್ನು ಕೊಡಬೇಕಾಗಿ ಬಂತು. ಆ ಪಕ್ಷಕ್ಕೆ ರಾಜೀನಾಮೆಯನ್ನು ಕೊಟ್ಟು, ಕಾಂಗ್ರೆಸ್ ಪಕ್ಷದಲ್ಲಿ ನಿಂತು ಗೆದ್ದು ಬಂದಿರುವಂಥಾದ್ದು.